ಪೊಲೀಸ್ ಮಹಾ ನಿರ್ದೇಶಕರು ಹಾಗೂ
ಮಹಾ ನಿರ್ದೇಶಕರ ಕಛೇರಿ,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು,
ನಂ. 1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ,
ಬೆಂಗಳೂರು-560 042

ಜಿಬಿಸಿ(2)32/2019-20

ದಿನಾಂಕ: 30-01-2021

ಕಚೇರಿ ಆದೇಶ

ವಿಷಯ: ನಿರಾಕ್ಷೇಪಣಾ/ಸಲಹಾ ಪತ್ರಗಳನ್ನು ನೀಡಲು ಸಿದ್ಧಪಡಿಸದ ನಮೂನೆಯಲ್ಲಿ 'GI' Class 'C' Pipes ಬದಲಾಗಿ 'GI' Class 'C' Pipes/ Chlorinated Polyvinyl Chloride (CPVC) Pipes-UL Approved ಎಂದು ಮರು ನಿಗಧಿಮಾಡುವ ಬಗ್ಗೆ

*-*-*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, Chlorinated Polyvinyl Chloride(CPVC)ಪೈಪ್‌ಗಳನ್ನು ಕಟ್ಟಡದಲ್ಲಿ ಅಳವಡಿಸುವ ವ್ಯವಸ್ಥೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಬಳಸಲಾಗುತ್ತಿರುತ್ತದೆ. ಈ ಬಗ್ಗೆ ಭಾರತೀಯ ಮಾನದಂಡಗಳ(Bureau of Indian Standards-BIS) IS-16088/2012 & IS-15105/2002ನಲ್ಲಿ ಸಹಾ ಉಪಯೋಗಿಸಲು ಶಿಫಾರಸ್ಸು ಮಾಡಿ, ಕಡಿಮೆ ಅಪಾಯಕಾರಿ/ಲಘು ಅಪಾಯಕಾರಿ(Light Hazardous/Low Hazardous) ಕಟ್ಟಡಗಳಲ್ಲಿ ಬಳಕೆ ಮತ್ತು ಉಪಯೋಗಿಸಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.

ಈ ಬಗ್ಗೆ ಸದರಿ Chlorinated Polyvinyl Chloride(CPVC) ಪೈಪ್‌ಗಳನ್ನು Light Hazardous / Low Hazardousಗಳಲ್ಲಿ ಅಳವಡಿಸುವುದರ ಬಗ್ಗೆ ಹಾಗೂ ಸಾಧಕ ಬಾಧಕಗಳನ್ನು ಭಾರತೀಯ ಮಾನದಂಡಗಳನ್ನು (Bureau of Indian Standards-BIS) ರಾಷ್ಟೀಯ ಕಟ್ಟಡ ಸಂಹಿತೆಯಂತೆ (National Building Code) ಮತ್ತು ಅವುಗಳಲ್ಲಿ ಸೂಚಿಸಲಾದ ನಿಂಬಂಧನೆಗಳನ್ನು ಪೂರೈಸುವುದರ ಬಗ್ಗೆ ಚಿರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಉಪಯೊಗಿಸಲು ತೀರ್ಮಾನಿಸಲಾಗಿರುತ್ತದೆ. ಈ ಬಗ್ಗೆ ಇತರೆ ರಾಜ್ಯದಲ್ಲಿ ಸಹಾ ಇಂತಹ Chlorinated Polyvinyl Chloride ಗಳನ್ನು ಉಪಯೊಗಿಸಲು ಸಹಾ ಸಹಮತಿ ನೀಡಿರುತ್ತಾರೆ.

ಆದಕಾರಣ ಇನ್ನು ಮುಂದೆ ಕಡಿಮೆ ಅಪಾಯಕಾರಿ/ಲಘು ಅಪಾಯಕಾರಿ (Light Hazardous/ Low Hazardous) ಕಟ್ಟಡಗಳಲ್ಲಿ ಅದುವೆ ಎಲ್ಲಾ ಮಾದರಿಯ ವಸತಿ, ಆಸ್ಪತ್ರೆ/ನರ್ಸಿಂಗ್‌ಹೊಂ, ವಾಣಿಜ್ಯ(Office Buildings)ಶಾಲೆ-ಕಾಲೇಜು (Institution)ಗಳಲ್ಲಿ ನಿರಾಕ್ಷೇಪಣಾ/ ಸಲಹಾ ಪತ್ರಗಳಲ್ಲಿ ಸಿದ್ಧಪಡಿಸಿ ನೀಡಲಾದ ನಮೂನೆಯಲ್ಲಿ 'GI' Class 'C' Pipes ಬದಲಾಗಿ 'GI' Class 'C' Pipes/ Chlorinated Polyvinyl Chloride (CPVC) Pipes-UL Approved Pipe Size of 20mm to 80mm ಎಂದು ಮರು ನಿಗಧಿಮಾಡಲಾಗಿದೆ. ಇನ್ನು ಮುಂದೆ ನೀಡಲಾಗುವ ಎಲ್ಲಾ ನಿರಾಕ್ಷೇಪಣಾ/ಸಲಹಾ ಪತ್ರಗಳ ನಮೂನೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡು ಕಟ್ಟು ನಿಟ್ಟಾಗಿ ಶಿಫಾರಸನ್ನು ಮಾಡಲು ಆದೇಶಿಸಿ ಹಾಗೂ ಕಾರ್ಯರೂಪಕ್ಕೆ ತರಲು ನಿರ್ದೇಶಿಸಿದೆ.

DGP & DIRECTOR GENERAL
KARNATAKA FIRE & EMERGENCY SERVICES
BENGALURU
560 042

ಪೊಲೀಸ್ ಮಹಾ ನಿರ್ದೇಶಕರು 30.1.21
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು

ಡಿ.ಜಿ.ಪಿ. ಮತ್ತು ಡಿ.ಜಿ.ರವರಿಂದ
ಕರಡು ಅನುಮೋದಿಸಲ್ಪಟ್ಟಿದೆ

ಗೆ,

1. ಎಲ್ಲಾ ಮುಖ್ಯ ಅಗ್ನಿಶಾಮಕ ಅಧಿಕಾರಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.
2. ಎಲ್ಲಾ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.
3. ಎಲ್ಲಾ ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.
4. ಅಧಿಕ್ಷಕರು ಬಿಬಿಸಿ ಶಾಖೆ ಮತ್ತು ವಿಷಯ ನಿರ್ವಹಕರು ಜಿಬಿಸಿ(1)- ಅನ್‌ಲೈನಲ್ಲಿ ನೀಡಲಾದ ನಮೂನೆಯನ್ನು ಬದಲಾಯಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ಪ್ರತಿ ಮಾಹಿತಿಗಾಗಿ:

1. ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು
2. ಎಲ್ಲಾ ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.